

## ನೋವು ಮೀರಿದ ಗೆಲುವು

# ಮಿಂಚಿನ ಮರಿ ಅಲ್ಕರಾಜ್

**ಜೋರು ದನಿಯನ್ನು ಹೊಮ್ಮಿಸುತ್ತಾ ಹೊಡೆತಗಳನ್ನು ಹೊಡೆಯುವ ಸ್ಪೇನ್‌ನ 21ರ ಹರೆಯದ ಪಾದರಸ ಕಾರ್ಲೋಸ್ ಅಲ್ಕರಾಜ್ ಫ್ರೆಂಚ್ ಓಪನ್ ಗೆದ್ದು ಬೀಗಿದರು. ಸೆಮಿಫೈನಲ್ ಹಾಗೂ ಫೈನಲ್‌ನಲ್ಲಿ ಐದು ಸೆಟ್‌ಗಳ ಸವಾಲನ್ನು, ತೊಡೆ ಸ್ನಾಯುವಿನ ನೋವನ್ನು ಮೀರಿಯೂ ಅವರು ಪುಟಿದೆದ್ದ ರೀತಿ ಕ್ರೀಡಾಸ್ಫೂರ್ತಿಗೆ ಗಟ್ಟಿ ಉದಾಹರಣೆ.**

■ **ವಿಶಾಖ ಎನ್.**

ಕಾರ್ಲೋಸ್ ಅಲ್ಕರಾಜ್ ತಮ್ಮ ಟೆನಿಸ್ ವೃತ್ತಿಬದುಕಿನಲ್ಲಿ ಹನ್ನೆರಡು ಸಲ ಐದು ಸೆಟ್‌ಗಳ ಆಟ ಆಡಬೇಕಾದ ಪರಿಸ್ಥಿತಿ ಇದುವರೆಗೆ ಸೃಷ್ಟಿಯಾಗಿದೆ. ಈ ಕಾಲದಲ್ಲಿನ ಸ್ಪರ್ಧೆಯ ತುರುಸು ಹೇಗಿರುತ್ತದೆ ಎನ್ನುವುದಕ್ಕೆ ಇದು ಉದಾಹರಣೆಯಷ್ಟೆ.

ಆ ಹನ್ನೆರಡು ಪಂದ್ಯಗಳ ಪೈಕಿ ಹನ್ನೊಂದರಲ್ಲಿ ಅವರು ಗೆಲುವು ಸಾಧಿಸಿದ್ದಾರೆ. ಅಡಿಗೆರೆ ಎಳೆಯಬೇಕಾಗಿರುವುದು ಈ ಸಂಗತಿಗೆ. ಇಟಲಿಯ ಮಟ್ಟೆವೊ ಬೆರೆಟ್ಟಿನಿ ವಿರುದ್ಧ 2022ರ ಆಸ್ಟ್ರೇಲಿಯಾ ಓಪನ್‌ನಲ್ಲಿ ಮಾತ್ರ ಐದು ಸೆಟ್‌ಗಳ ಪಂದ್ಯವೊಂದನ್ನು ಅವರು ಸೋತಿದ್ದು. ಅದಾದ ನಂತರ ಸತತ ಎಂಟು ಸಲ ಗರಿಷ್ಠ ಸೆಟ್‌ಗಳ ಆಟದಲ್ಲಿ ವಿಜಯಲಕ್ಷ್ಮಿಯನ್ನು ಅವರು ಒಲಿಸಿಕೊಳ್ಳುತ್ತಾ ಬಂದಿದ್ದಾರೆ.

ಸ್ಪೇನ್‌ನ ಅಲ್ಕರಾಜ್ ಈ ವರ್ಷ ರೋಲ್ಯಾಂಡ್ ಗ್ಯಾರೊಸ್ ಕಣಕ್ಕೆ ಇಳಿದಾಗ ಭರ್ತಿ ಹುಮ್ಮಸ್ಸಿನಲ್ಲಿದ್ದರು. ಯಾಕೆಂದರೆ, ಈ ಗ್ರ್ಯಾನ್‌ಸ್ಲ್ಯಾಮ್‌ನಲ್ಲಿ ಆಡುವ ಮೊದಲು ಅವರು ಕೈ ನೋವಿನಿಂದಾಗಿ ಕೆಂಪು ಕಣವನ್ನು ದೂರದಿಂದಲೇ ನೋಡುತ್ತಾ ಕೂರಬೇಕಾಗಿ ಬಂದಿತ್ತು. ಫ್ರೆಂಚ್ ಓಪನ್ ಟೆನಿಸ್ ಚಾಂಪಿಯನ್ ಆಗಬೇಕೆನ್ನುವ ಕನಸು ನೇವರಿಸುವುದನ್ನು ಮಾತ್ರ ಅವರು ಬಿಟ್ಟಿರಲಿಲ್ಲ.



ಈ ಸಲ ಮೊದಲ ಕೆಲವು ಸುತ್ತುಗಳ ಪಂದ್ಯಗಳಲ್ಲಿ ಅವರು ಲಯ ಕಂಡುಕೊಂಡಿದ್ದನ್ನು ನೋಡಿದ ಅಭಿಮಾನಿಗಳು, ತುಂಬು ಹೃದಯದಿಂದ ಕರತಾಡನ ಮಾಡಿದರು. ಆದರೆ, ಮಜಾ ಕೊಟ್ಟಿದ್ದು ಸೆಮಿಫೈನಲ್ ಹಾಗೂ ಫೈನಲ್ ಪಂದ್ಯಗಳು.

ಇಟಲಿಯ ಯನಿಕ್ ಸಿನ್ನರ್ ವಿರುದ್ಧದ ಸೆಮಿಫೈನಲ್ ಪಂದ್ಯವನ್ನು ಗಮನಿಸೋಣ. ಏಳು ಏಸ್‌ಗಳು, ಎಂಟು ಡಬಲ್ ಫಾಲ್ಟ್‌ಗಳು, ಮೊದಲ